ಇ) ಈ ಯಡಗ ಏತ ನೀರಾವರಿ ಯೋಜನೆಯನ್ನು ಕೂಡಲೇ ಮಂಜೂರು ಮಾಡಿ ರೈತರಿಗೆ ನೀರಾವರಿ ಅನುಕೂಲ ಯಾವಾಗ ಮಾಡಿ ಕೊಡಲಾಗುವುದು?

ಈ) 2000, ಇಸವಿಯ ಒಳಗಾಗಿ ಆ ಕಾಗಿನ ನದಿ ಬೃಹತ್ ಪ್ರಮಾಣ ಯೋಜನೆಯನ್ನು ಪೂರ್ತಿ ಮಾಡಬೇಕಾದರೆ ಈಗಾಗಲೇ ಕೆಲಸ ಪ್ರಾರಂಭ ಮಾಡಿದರೆ ಮಾತ್ರ ಕಾರ್ಯರೂಪಕ್ಕೆ ಬರುವುದಿಲ್ಲವೇ?

ಉ) ಒಂದು ವೇಳೆ ಆ ಯೋಜನೆ 2000 ಇಸವಿ ಒಳಗಾಗಿ ನಿರ್ಮಾಣ ಮಾಡದಿದ್ದರೆ ಕುರಕುಂಟ ಐಹಾಳ್‌ತೆಲಕೂರು ಹಾಗೂ ಆಚ್ಚುಕಟ್ಟು ಪ್ರದೇಶದ ವ್ಯಾಪ್ತಿಯಲ್ಲಿ ಬರಲಾರದ ಯಡಗ ಏತ ನೀರಾವರಿ ಯೋಜನೆಯನ್ನು ಕೈಗೆತ್ತಿಕೊಂಡು ರೈತರಿಗೆ ನೀರಾವರಿ ಅನುಕೂಲ ಯಾವಾಗ ಮಾಡಿಕೊಡಲಾಗುವುದು?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು) :

ಕುರುಕುಂಟ ಮತ್ತು ಐಹಾಳ್ ಏತ ನೀರಾವರಿ ಯೋಜನೆಗಳು ಕಾಗಿನ ನದಿಗೆ ಅಡ್ಡಲಾಗಿ ಉದ್ದೇಶಿಸಿರುವ ಕಾಗಿನ ಮಧ್ಯಮ ನೀರಾವರಿ ಯೋಜನೆಯ ಮುಳುಗಡೆ ಪ್ರದೇಶದಲ್ಲೂ ಮತ್ತು ಯಡಗ ಏತ ನೀರಾವರಿ ಯೋಜನೆಯು ಕಾಗಿನ ಯೋಜನೆಯ ಆಚ್ಚುಕಟ್ಟು ಪ್ರದೇಶದಲ್ಲೂ ಬರುವುದರಿಂದ ಮೂರು ಏತ ನೀರಾವರಿ ಯೋಜನೆಗಳನ್ನು ಕೈಗೆತ್ತಿಕೊಳ್ಳಬೇಕೇ ಇಲ್ಲವೇ ಎಂಬ ಬಗ್ಗೆ ಸುಧೀರ್ಘವಾಗಿ ಪರಿಶೀಲಿಸಿ ನಂತರ ನಿರ್ಣಯ ತೆಗೆದುಕೊಳ್ಳಲಾಗುವುದು.

ಕಾಗಿನ ಮಧ್ಯಮ ನೀರಾವರಿ ಯೋಜನೆಯನ್ನು ಕ್ರಿ.ಶ. 2000 ಇಸವಿಯೊಳಗೆ ಪೂರ್ಣಗೊಳಿಸುವ ಕಾರ್ಯಕ್ರಮವಿದೆ.

ಹೇಮಾವತಿ ಎಡದಂಡೆ ನಾಲೆಯ ದುರಸ್ತಿ

292 - ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಹೊಳೆನರಸೀಪುರ) : ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೇಮಾವತಿ ಎಡದಂಡೆ ನಾಲೆಯ ಸರಪಳಿ 46.12 ರ ಕಿ.ಮೀ. ಒಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಆ ನಾಲೆ ಯಾವಾಗ ಒಡೆಯಿತು ಹಾಗೂ ಆದರಿಂದ ರೈತರಿಗೆ ಆಗಿರತಕ್ಕ ಅಂದಾಜು ನಷ್ಟವೆಷ್ಟು ;

ಇ) ಆ ನಾಲೆಯ ದುರಸ್ತಿಗಾಗಿ ಇಲ್ಲಿಯವರೆಗೆ ಖರ್ಚು ಮಾಡಲಾದ ಹಣವೆಷ್ಟು;

ಈ) 1993-94 ರ ಡಿಸೆಂಬರ್ ಅಂತ್ಯದವರೆಗೆ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ.

ಉ) ಆ ನಾಲೆಯ ದುರಸ್ತಿಗಾಗಿ ಒಟ್ಟು ತಗಲುವ ಅಂದಾಜು ವೆಚ್ಚವೆಷ್ಟು;

ಊ) ಆ ದುರಸ್ತಿ ಕೆಲಸವನ್ನು ಯಾವಾಗ ಮುಗಿಸಲಾಗುವುದು ;

ಋ) ರೈತರಿಗೆ ಆಗಿರುವ ನಷ್ಟಕ್ಕೆ ಸರ್ಕಾರದಿಂದ ನೀಡಿರುವ ಪರಿಹಾರದ ಹಣವೆಷ್ಟು?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು) :

ಅ) ಹೌದು.

ಆ) ದಿನಾಂಕ 13-12-92 ರಂದು. ರೈತರಿಗೆ ಇದರಿಂದ 10.30 ಲಕ್ಷ ರೂ.ಗಳ ನಷ್ಟವಾಗಿರುತ್ತದೆ.

ಇ) ರೂ. 5.53 ಲಕ್ಷಗಳು.

ಈ) ರೂ.5.53 ಲಕ್ಷಗಳು.

ಊ) ಈಗಾಗಲೇ ಪೂರ್ಣಗೊಳಿಸಲಾಗಿದೆ.

ಋ) ಸರ್ಕಾರದ ಪರಿಶೀಲನೆಯಲ್ಲಿದೆ.

ಸೇಡಂ ತಾಲ್ಲೂಕಿನ ಕಾಗಿನ ನದಿಗೆ ಬೃಹತ್ ನೀರಾವರಿ ಯೋಜನೆ

204 - ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ): ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗ ಜಿಲ್ಲೆಯ ಸೇಡಂ ತಾಲ್ಲೂಕಿನ ಕಾಗಿನ ನದಿಗೆ ಬೃಹತ್ ನೀರಾವರಿ ಯೋಜನೆಗಳನ್ನು ತೆಗೆದುಕೊಂಡು 2000ಸಾಲಿನ ಒಳಗಾಗಿ ಪೂರ್ತಿಗೊಳಿಸುವುದರಲ್ಲಿ ಕುರಕುಂಟಿ, ಐಹಾಳ್, ತೆಲಕೂರು ಏತ ನೀರಾವರಿ ಯೋಜನೆಗಳು ಆದರೆ ಅಚ್ಚುಕಟ್ಟು ಪ್ರದೇಶದಲ್ಲಿ ಬರುವುದರಿಂದ ಅವುಗಳನ್ನು ಸ್ಥಗಿತಗೊಳಿಸಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಒಂದು ವೇಳೆ ಆ ಯೋಜನೆ ಪ್ರಾರಂಭ ಮಾಡಿದರೆ ಪೂರ್ತಿಗೊಳ್ಳಲು ಕನಿಷ್ಠ 10 ವರ್ಷಗಳಾದರೂ ಬೇಕಾಗುವುದಿಲ್ಲವೇ?

ಇ) ಆ ಯೋಜನೆಯನ್ನು 2000 ಇಸವಿಯ ಒಳಗೆ ಮುಗಿಸಿ ರೈತರಿಗೆ ನೀರಾವರಿ ಅನುಕೂಲ ಮಾಡಿಕೊಡಲಾಗುವುದೇ?

ಈ) ಒಂದು ಕಡೆ ಏತ ನೀರಾವರಿ ಯೋಜನೆಗಳು ರದ್ದು ಮಾಡಿ ರೈತರಿಗೆ ನೀರಾವರಿ ಸೌಲಭ್ಯ ಸಿಗುವುದನ್ನು ತಪ್ಪಿಸಿ ಇನ್ನೊಂದು ಕಡೆ ಬೃಹತ್ ನೀರಾವರಿ ಯೋಜನೆ ಇಲ್ಲದಂತೆ ಮಾಡಿ ಆ ಭಾಗದ ರೈತರಿಗೆ ನೀರಾವರಿ ಸೌಲಭ್ಯ ಸಿಗದಂತೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) 1994-95ನೇ ಸಾಲಿನಲ್ಲಿ ಆ ಕಾಗಿನ ನದಿಯ ಬೃಹತ್ ಯೋಜನೆಯನ್ನು ಪ್ರಾರಂಭ ಮಾಡಿ ರೈತರಿಗೆ ನೀರಾವರಿ ಸೌಲಭ್ಯ ಒದಗಿಸಲಾಗುವುದೇ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):

ಅ) ಕುರಕುಂಟಿ, ಐಹಾಳ್ ಮತ್ತು ತೆಲಕೂರು ಏತ ನೀರಾವರಿ ಯೋಜನೆಗಳಡಿ ಉದ್ದೇಶಿಸಲಾಗಿರುವ ಅಚ್ಚುಕಟ್ಟು ಪ್ರದೇಶವು ಕಾಗಿನ ನದಿಗೆ ಅಡ್ಡಲಾಗಿ ಉದ್ದೇಶಿಸಿರುವ ಕಾಗಿನ ಮಧ್ಯಮ ನೀರಾವರಿ ಯೋಜನೆಯ ಮುಳುಗಡೆ ಪ್ರದೇಶದಲ್ಲಿ ಬರುವುದರಿಂದ ಈ ಮೂರು ಏತ ನೀರಾವರಿ ಯೋಜನೆಗಳನ್ನು ಕೈಗೊಳ್ಳಬೇಕೇ ಇಲ್ಲವೇ ಎಂಬ ಬಗ್ಗೆ ಸುಧೀರ್ಘವಾಗಿ ಪರಿಶೀಲಿಸಿ ನಂತರ ನಿರ್ಣಯ ತೆಗೆದುಕೊಳ್ಳಲಾಗುವುದು.

ಆ), ಇ) ಮತ್ತು ಈ) ಕಾಗಿನ ಮಧ್ಯಮ ನೀರಾವರಿ ಯೋಜನೆಯನ್ನು ಕ್ರಿ.ಶ. 2000 ಇಸವಿಯೊಳಗೆ ಪೂರ್ಣಗೊಳಿಸುವ ಕಾರ್ಯಕ್ರಮವಿದೆ.

ಉ) ಈ ಯೋಜನೆಯ ವರದಿಯನ್ನು ತಯಾರಿಸಿ ತಾಂತ್ರಿಕ ಸಮಿತಿಯ ಒಪ್ಪಿಗೆ ಪಡೆದ ನಂತರವೇ ಅದರ ಕಾಮಗಾರಿಯನ್ನು ಪ್ರಾರಂಭಿಸಬೇಕಾಗಿದೆ.

ತುಮಕೂರು ಜಿಲ್ಲಾ ಶಿರಾ ಲೋಕೋಪಯೋಗಿ ಉಪ ವಿಭಾಗಕ್ಕೆ ಅಭಿವೃದ್ಧಿ ಕಾಮಗಾರಿಗೆ ಹಣ ಬಿಡುಗಡೆ

305 - ಶ್ರೀ ಸಿ. ವೀರಭದ್ರಯ್ಯ (ಕೊರಟಿಗೆರೆ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆ ಶಿರಾ ಲೋಕೋಪಯೋಗಿ ಉಪ ವಿಭಾಗಕ್ಕೆ ಎಷ್ಟು ತಾಲ್ಲೂಕುಗಳು ಸೇರಿವೆ;

ಆ) ಆ ತಾಲ್ಲೂಕುಗಳಿಗೆ 1990 ರಿಂದ 1994ರ ಜನವರಿ ಅಂತ್ಯದವರೆಗೆ ಸರ್ಕಾರದಿಂದ ಅಭಿವೃದ್ಧಿ ಕಾಮಗಾರಿಗಳಿಗೆ ತಾಲ್ಲೂಕುವಾರು ಎಷ್ಟೆಷ್ಟು ಹಣ (ಎಲ್ಒಸಿ) ಬಿಡುಗಡೆಯಾಗಿದೆ;